# ಶಿಕಾಗೊದಲ್ಲಿ ಒಂದು ದಿನ...

ಶಿಕಾಗೋದಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ ಭಾಷಣದ ವೇದಿಕೆ ನೋಡುವ ಸೌಭಾಗ್ಯ ನನ್ನದಾಗಿತ್ತು. ಆ ವೇದಿಕೆಯ ಮುಂಭಾಗದಲ್ಲಿ ನಿಂತು ಫೋಟೊ ಕ್ಲಿಕ್ಕಿಸಿಕೊಂಡು ಬಂದ ಕ್ಷಣ ಕೂಡ ಸವಿನೆನಪುಗಳ ಸಾಲಿನಲ್ಲಿ ಸೇರಿದೆ.

■ ಸೀತಾ ಎಸ್. ನಾರಾಯಣ

ಚಿಕ್ಕಮಗಳೂರು ಜಿಲ್ಲೆ `ಶಿವನಿ' ಎಂಬ ಪುಟ್ಟ ಗ್ರಾಮದ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಓದುತಿದ್ದಾಗ ಆಗಾಗ್ಗೆ ಇರುತ್ತಿದ್ದ ಚರ್ಚಾಸ್ಪರ್ಧೆ ಮತ್ತು ಭಾಷಣ ಸ್ಪರ್ಧೆಗಳು ನನಗೆ ಮರೆಯಲಾರದ ಸವಿನೆನಪು.

ಚರ್ಚಾಸ್ಪರ್ಧೆಗೆ ಶಿಕ್ಷಕರೇ ಬರೆದು ಕೊಡುತ್ತಿದ್ದರೂ ಸಹ ನಾವು ಉರು ಹೊಡೆದು ನಮ್ಮದೇ ಎಂಬಂತೆ ಮಾತನಾಡುತ್ತಿದುದು ಒಂದು ಅಪೂರ್ವ ಅನುಭವ. ಒಮ್ಮೆ ಸ್ವಾಮಿ ವಿವೇಕಾನಂದರ ಬಗ್ಗೆ, ಅವರ ಶಿಕಾಗೊ ಭಾಷಣದ ಬಗ್ಗೆ ಮಾತನಾಡುವಾಗ `ಶಿಕಾಗೊ' ಪದ ಅಚ್ಚಳಿಯದೆ ನನ್ನ ಮನದಲ್ಲಿ ಬೇರುಬಿಟ್ಟಿತ್ತು. ಶಿಕಾಗೋವನ್ನು ನೋಡುವ ನನ್ನಾಸೆ 50 ವರ್ಷಗಳ ನಂತರ ಈಡೇರಿತು. ಕಳೆದ ಜೂನ್‌ನಲ್ಲಿ ಮೊಮ್ಮಗಳ ಶಾಲೆಗೆ ರಜಾ ಇದ್ದುದರಿಂದ ಅದೇ ಸಮಯಕ್ಕೆ ಅಮೆರಿಕದ ಮ್ಯಾಡಿಸನ್‌ನಲ್ಲಿದ್ದ ಮಗನ ಮನೆಗೆ ಹೋದ ನಾವು ಅಲ್ಲಿ 4 ತಿಂಗಳು ಇದ್ದೆವು. ಸೆಪ್ಟೆಂಬರ್ 9–10, ಶಿಕಾಗೊ ವೀಕ್ಷಣೆಗೆ ಹೊರಟೆವು. ನಾನಂತೂ ವಿಪರೀತ ಭಾವುಕಳಾಗಿದ್ದೆ.

ಮ್ಯಾಡಿಸನ್‌ನಿಂದ ಶಿಕಾಗೊ ಎರಡು ಗಂಟೆಯ ಪಯಣ. ನಾವೆಲ್ಲರೂ ಬೆಳಿಗ್ಗೆಯೇ ಊಟ ಉಪಾಹಾರದ ಸಿದ್ಧತೆಗಳೊಂದಿಗೆ ಚಿಕಾಗೊ ತಲುಪಿದಾಗ 10 ಗಂಟೆಯಾಗಿತ್ತು. ಮಿಲೇನಿಯಮ್ ಪಾರ್ಕ್‌ಗೆ ಹತ್ತಿರದಲ್ಲೇ ಕಾರು ಪಾರ್ಕಿಂಗ್ ಮಾಡಿ ಕಾಲ್ನಡಿಗೆಯಲ್ಲಿ ಪಾರ್ಕ್ ಬಳಿಯೇ ಇರುವ ಸ್ವಾಮಿ ವಿವೇಕಾನಂದರು ಭಾಷಣ ಮಾಡಿದ ಸ್ಥಳದತ್ತ ಹೊರಟೆವು. `ದ ಆರ್ಟ್ ಇನ್ಸ್ಟಿಟ್ಯೂಟ್ ಆಫ್ ಶಿಕಾಗೊ' ಎಂಬ ದೊಡ್ಡ ಕಟ್ಟಡದಲ್ಲಿ ವಿಶ್ವದ ಎಲ್ಲಾ ಧರ್ಮಗಳ ವಿವರ, ಆಯಾ ಧರ್ಮಗಳಿಗೆ ಸಂಬಂಧಿಸಿದ ದೇಶ ವಿದೇಶಗಳ ದೇವಾನುದೇವತೆಗಳ ಮೂರ್ತಿಗಳಿವೆ. ಅಷ್ಟನ್ನೂ ಸಂಪೂರ್ಣ ನೋಡಲು ನಮಗೆ ಹೆಚ್ಚು ಸಮಯವಿರದ ಕಾರಣ ತರಾತುರಿಯಲ್ಲಿ ವೀಕ್ಷಿಸಿದೆವು. ಮಗ ಸೊಸೆ ಕಾರಣಾಂತರದಿಂದ ನಮ್ಮೊಂದಿಗೆ ಬರಲಿಲ್ಲ.






ಮುಖ್ಯವಾಗಿ ವಿವೇಕಾನಂದರ ಭಾಷಣ ನಡೆದ ಸ್ಥಳ ನೋಡಲು ಸಿಬ್ಬಂದಿಯಲ್ಲಿ ವಿಚಾರಿಸಿದಾಗ ಅವರಿಗೆ ನಮ್ಮ ಇಂಗ್ಲಿಷ್ ಅರ್ಥವಾಗಲಿಲ್ಲ. ಕೊನೆಗೂ ಒಬ್ಬ ಹಿರಿಯ ಮಹಿಳೆ `ಫುಲರ್ಟನ್ ಹಾಲ್' ಎಂದು ಬರೆದು ಕೊಟ್ಟು ಅಲ್ಲಿ ಹೋಗಿ ಕೇಳಿ ಎಂದೂ ಎಲ್ಲಿದೆಯೆಂದು ತಿಳಿಸಿದರು. ಆ ಹಾಲ್‌ನ ಮುಂಭಾಗದಲ್ಲಿ ಸ್ವಾಮಿ ವಿವೇಕಾನಂದರ ಧೀಮಂತ ಚಿತ್ರ, ಸಹಿ, ತಾರೀಕು, ಆ ಸಂದರ್ಭದ ವಿವರ ನೋಡಿ ಹೆಮ್ಮೆಯಾಯಿತು. ನಾವು ಹೋದ ಸಮಯ ವಿವೇಕಾನಂದರ ಭಾಷಣಕ್ಕೆ 125 ನೇ ವರ್ಷದ ಸಂಭ್ರಮ.

ಈ ಪ್ರಯುಕ್ತ ಸೆಪ್ಟೆಂಬರ್ 9, 10, 11ರಂದು ವಿವಿಧ ಕಾರ್ಯಕ್ರಮ ಬೇರೆಡೆ ನಡೆಯುತ್ತಿತ್ತು. ಅದರ ವಿವರವಿರುವ ಕಾರ್ಡನ್ನು ಸಹ ಕೊಟ್ಟರು. ಆದರೆ ನಮಗೆ ಅಲ್ಲಿಗೆ ಹೋಗಲಾಗಲಿಲ್ಲ. ವಿಶ್ವವನ್ನು ಸೆಳೆದ ಐದೂವರೆ ನಿಮಿಷಗಳ ಆ ಪ್ರಸಿದ್ಧವಾದ ಭಾಷಣದಲ್ಲಿ ಸ್ವಾಮಿ ವಿವೇಕಾನಂದರು 2 ನಿಮಿಷಗಳ ಕಾಲ ಚಪ್ಪಾಳೆ ಗಿಟ್ಟಿಸಿ, ಮೂರೂವರೆ ನಿಮಿಷಗಳು ವಿಚಾರಪೂರ್ಣವಾಗಿ ಮಾತನಾಡಿದರು. ಆ ಭಾಷಣವು ವಿಶ್ವಕ್ಕೆಲ್ಲಾ ಧರ್ಮದ ಜ್ಯೋತಿಯ ಬೆಳಕನ್ನು ಬೀರಿ ಹೇಗೆ ಆಲೋಚಿಸಬೇಕೆಂದು ಮತ್ತು ಭಾರತ ಎಂದರೆ ಏನೆಂದು ಜಗತ್ತಿಗೆ ಸಾರಿತು.

ಅಲ್ಲಿ ಸ್ವಾಮಿ ವಿವೇಕಾನಂದರು ಹೇಳಿದ್ದೇನು?

`ಅಮೇರಿಕಾದ ಸಹೋದರಿಯರೇ ಮತ್ತು ಸಹೋದರರೇ ನಮಗೆ ನೀವು ನೀಡಿರುವ ಆತ್ಮೀಯವಾದ ಸ್ವಾಗತಕ್ಕೆ ವಂದನೆಗಳನ್ನು ಸಮರ್ಪಿಸಲು ಪ್ರಯತ್ನಿಸುತ್ತಿರುವ ಈ ಸಂದರ್ಭದಲ್ಲಿ ನನ್ನ ಹೃದಯ ಅವರ್ಣನೀಯ ಆನಂದದಿಂದ ತುಂಬಿ ತುಳುಕುತ್ತಿದೆ. ಪ್ರಪಂಚದ ಅತ್ಯಂತ ಪ್ರಾಚೀನವಾದ ಸನ್ಯಾಸಿಗಳ ಪರವಾಗಿ ನಿಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ಹಿಂದೂ ಜನಾಂಗಕ್ಕೆ ಸೇರಿದ ಎಲ್ಲಾ ವರ್ಗಗಳ ಪಂಥಗಳ ಕೋಟ್ಯಾನುಕೋಟಿ ಜನರ ಪರವಾಗಿ ನಿಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ'.

ಸ್ವಾಮಿ ವಿವೇಕಾನಂದರು ಭಾಷಣ ಮಾಡಿದ ಆ ವೇದಿಕೆಯ ದರ್ಶನ ನನ್ನಲ್ಲಿ ಮತ್ತೊಂದು ಸವಿನೆನಪಾಗಿ ಉಳಿಯಿತು. ನಂತರ ನಾವು ಶಿಕಾಗೋದ ಇತರ ಸ್ಥಳಗಳನ್ನು ನೋಡಿ ಹಿಂದಿರುಗಿದೆವು. ■